**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**
**<u>ದಕ್ಷಿಣ ಕನ್ನಡ, ಮಂಗಳೂರು.</u>**

**<u>ಸ್ಪೆಷಲ್ ಕೇಸ್ ನಂಬ್ರ 124/2020</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ದಿನೇಶ್** | <u>ಪ್ರಾಸಾಃ 26</u> |
| ತಂದೆಯ ಹೆಸರು | : | ರುದ್ರಾಚಾರ್ಯ | <u>ಚಾಸಾಃ 66</u> |
| ಪ್ರಾಯ | : | 47 ವರ್ಷ | **<u>ದಿನಾಂಕಃ 18.01.2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಹಾಯಕ ತೋಟಗಾರಿಕಾ ಅಧಿಕಾರಿ, ತೋಟಗಾರಿಕಾ ಇಲಾಖೆ, ಬಂಟ್ವಾಳ. | |
| ವಾಸಸ್ಥಳ | : | ಪುತ್ತೂರು. | |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ</u>**

ನಾನು ಹಿರಿಯ ತೋಟಗಾರಿಕಾ ನಿರ್ದೇಶಕನಾಗಿ ಪುತ್ತೂರಿನಲ್ಲಿ ದಿನಾಂಕಃ 08.04.2017 ರಿಂದ 31.05.2018 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿ ಪೊಲೀಸರು, 1ನೇ ಆರೋಪಿಯ ತಾಯಿಗೆ ಸಂಬಂಧಿಸಿದಂತೆ ಪುತ್ತೂರು ತಾಲೂಕಿನ ಅವರ ಜಮೀನಿಗೆ ಸಂಬಂಧಿಸಿದಂತೆ ತೋಟಗಾರಿಕಾ ಬೆಳೆಗಳ ವಿವರ ಮತ್ತು ಅದರ ಆದಾಯದ ವರ್ಷಾವಾರು ವಿವರಗಳನ್ನು ಕೇಳಿರುತ್ತಾರೆ. ಅದರಂತೆ ನಮ್ಮ ಹೋಬಳಿ ಮಟ್ಟದ ತಾಂತ್ರಿಕ ಅಧಿಕಾರಿ ಮತ್ತು ಪೊಲೀಸರು ಹಾಗೂ ಗ್ರಾಮಕರಣಿಕರು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿರುತ್ತಾರೆ. ಅದರಂತೆ ವರದಿ ತಯಾರಿಸಿದ್ದು, ಅದನ್ನು ನಾನು ದಿನಾಂಕಃ 31.05.2018 ರಂದು ತನಿಖಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸದರಿ ದಾಖಲೆಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ **ನಿ.ಪಿ.119** ಎಂದು

ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-119(ಎ) ಎಂದು ಗುರುತಿಸಲಾಯಿತು.

3. ಸದರಿ ಮೌಲ್ಯಮಾಪನ ವರದಿಯನ್ನು ತಯಾರಿಸುವ ವೇಳೆ ನಾವು ನಮ್ಮ ಇಲಾಖೆಯ ಮೌಲ್ಯಮಾಪನ ಮಾರ್ಗಸೂಚಿಯನ್ನು ಮತ್ತು ಎ.ಪಿ.ಎಂ.ಸಿ. ಯಿಂದ ವರ್ಷವಾರು ಬೆಳೆಗಳ ಮಾರುಕಟ್ಟೆ ಧಾರಣೆಯನ್ನು ಪಡೆದುಕೊಂಡು, ಆದಾಯ ಮತ್ತು ಖರ್ಚಿನ ಬಗ್ಗೆ ವರದಿ ತಯಾರಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ.ವಿ.ಹೆಚ್. ವಕೀಲರಿಂದಃ**

(ಆರೋಪಿ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.

<u>ದಿನಾಂಕಃ 27.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ.ವಿ.ಹೆಚ್. ವಕೀಲರಿಂದಃ</u>

4. ನಾನು ಸದರಿ ಸ್ಥಳಕ್ಕೆ ಖುದ್ದಾಗಿ ಹೋಗಿಲ್ಲ, ಬದಲಿಗೆ ನಮ್ಮ ಹೋಬಳಿ ಮಟ್ಟದ ತಾಂತ್ರಿಕ ಅಧಿಕಾರಿ ಹೋಗಿದ್ದರು. ಅವರ ಹೆಸರು ಹೊಳೇಬಸಪ್ಪ ಕುಂಬಾರ್ ಆಗಿರುತ್ತದೆ, ಸದರಿ ಹೆಸರನ್ನು ನಾನು ವರದಿಯಲ್ಲಿ ಬರೆದಿರುತ್ತೇನೆ. ಸದರಿ ತಾಂತ್ರಿಕ ಅಧಿಕಾರಿಯ ಹೆಸರನ್ನು ನಮ್ಮ ವರದಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಸ್ಥಳದಲ್ಲಿ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ವರದಿಯ ಜೊತೆಯಲ್ಲಿ ಮಹಜರಿನ ಪ್ರತಿಯನ್ನು ಅಳವಡಿಸಿಲ್ಲ ಎಂದರೆ ಸರಿ.

5. ನಮಗೆ ಕೇಳಿದ ವರದಿಯ ಇಸವಿ 1988 ನದ್ದಾಗಿದೆ, ಆದರೆ ನಾವು 2000ನೇ ಇಸವಿಯಿಂದ ಕೇಳಿದ ಮಾಹಿತಿಯನ್ನು ನೀಡಿದ್ದೇವೆ. 1988 ರಿಂದ 2000ರ ತನಕ ಇರುವ ಮಾಹಿತಿಯನ್ನು ನನ್ನ ವರದಿಯಲ್ಲಿ ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದೇ ಇರುವ ಕಾರಣ ವರದಿಯಲ್ಲಿ ಇರುವ ಮಾಹಿತಿ ಸುಳ್ಳಾಗಿದೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಕಛೇರಿಯಲ್ಲಿ ಕುಳಿತು ಸದ್ರಿ ವರದಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಲೆಕ್ಕಾಚಾರ ಮಾಡಿರುವ ಶೇಕಡಾವಾರು ಲೆಕ್ಕಾಚಾರಕ್ಕೆ ಸರಕಾರ

ಹೊರಡಿಸಿರುವ ಮಾರ್ಗಸೂಚಿಯನ್ನು ಅಳವಡಿಸಿಲ್ಲ. ಹಾಗಾಗಿ ನನ್ನ ವರದಿ ಸುಳ್ಳಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.